**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 35/2017

ಪಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಗಂಗಾಧರ ಹೊಂಗಲ್ |
| ತಂದೆಯ ಹೆಸರು | ಯಲ್ಲಪ್ಪ |
| ವಯಸ್ಸು | 49 ವರ್ಷ |
| ಉದ್ಯೋಗ | ಎ.ಎಸ್.ಐ, ಮುಂಡಗೋಡ ಪೋಲಿಸ್ ಠಾಣೆ |
| ವಾಸ್ತವ್ಯ | ಮುಂಡಗೋಡ |

ಸಾಕ್ಷಿಯನ್ನು ದಿನಾಂಕ **05.11.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸಿ ಆರ್ ಪಿ ಸಿ ಕಲಂ 299 ರಡಿಯಲ್ಲಿ ಸಾಕ್ಷ್ಯ ವಿಚಾರಣೆಃ**

ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಉದ್ಘೋಷಣಾ ವಾರಂಟ್ ಜಾರಿಯಾಗಿದ್ದು , ಆ ಪ್ರಕಾರ ದಿನಾಂಕಃ 23.04.2025 ರಂದು ನಾನು ಮತ್ತು ಹೆಚ್.ಸಿ-1190 ಆರೋಪಿಯ ಊರಾದ ಇಂದೂರು ಗ್ರಾಮಕ್ಕೆ ತೆರಳಿ, ಆತನ ಬಗ್ಗೆ ವಿಚಾರಿಸಲಾಗಿ, ಸಾಕಷ್ಟು ದಿನಗಳಿಂದ ಆತನು ಮನೆಗೆ ಬಂದಿರುವುದಿಲ್ಲ ಎಂದು ನಮಗೆ ತಿಳಿದುಬಂದಿರುತ್ತದೆ, ನಂತರ, ನಾವು ಕರವೀರಪ್ಪ ಬಡಿಗೇರ್ ಮತ್ತು ಸೋಮು ಇಳಿಗೇರ್ ಇವರುಗಳನ್ನು ಪಂಚರಾಗಿ ಕರೆದುಕೊಂಡು ಆರೋಪಿಯ ವಿಳಾಸಕ್ಕೆ ಹೋಗಿ ನೋಡಲಾಗಿ, ಆರೋಪಿಯ ಮನೆ ಬೀಗ್ ಹಾಕಿದ್ದು ಕಂಡುಬಂದಿರುತ್ತದೆ. ಆ ಬಗ್ಗೆ ಸ್ಥಳೀಕರಲ್ಲಿ ವಿಚಾರಿಸಿ, ನಂತರ ಉದ್ಘೋಷಣಾ ವಾರಂಟಿನ ಪ್ರತಿಯನ್ನು ಆರೋಪಿಯ ಮನೆಗೆ ಅಂಟಿಸಿ , ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ, ಛಾಯಾ ಚಿತ್ರವನ್ನು ತೆಗೆದುಕೂಂಡು, ಪಂಚರ ಸಹಿಯನ್ನು ಪಡೆದುಕೊಂಡೇವು. ನಂತರ, ಅದೇ ಪಂಚರೊಂದಿಗೆ ಬಸ್ ನಿಲ್ದಾಣಕ್ಕೆ ತೆರಳಿ , ಅಲ್ಲಿಯೂ ಸಹಿತ ಆರೋಪಿಯ ಹೆಸರನ್ನು ಕೂಗಿ ಹೇಳಿ , ಸ್ಥಳೀಯರನ್ನು ವಿಚಾರಿಸಿ, ಉದ್ಘೋಷಣಾ ವಾರಂಟಿನ ಪ್ರತಿಯನ್ನು ಸ್ಥಳದಲ್ಲಿ ಎದ್ದು ಕಾಣುವಂತೆ ಅಂಟಿಸಿರುತ್ತೇವೆ.

ನಂತರ ಅದೇ ಪಂಚರೊಂದಿಗೆ ಗ್ರಾಮ ಪಂಚಾಯಿತಿಗೆ ತೆರಳಿ, ಪಿ.ಡಿ.ಓ ರವರಿಗೆ ಸದರಿ ಆರೋಪಿಯ ಹೆಸರಿನಲ್ಲಿ ಚರಾಸ್ತಿ ಅಥವಾ ಸ್ಥಿರಾಸ್ತಿ ಇದ್ದಲ್ಲಿ ಮಾಹಿತಿಯನ್ನು ಒದಗಿಸುವಂತೆ, ಮನವಿ ಪತ್ರವನ್ನು ಸಲ್ಲಿಸಿ, ಅಲ್ಲಿಯ ನೋಟಿಸ್ಸ ಬೋರ್ಡಿಗೂ ಸಹಿತ ಉದ್ಘೋಷಣಾ ವಾರಂಟಿನ ಪ್ರತಿಯನ್ನು ಎದ್ದು ಕಾಣುವಂತೆ ಪಂಚರ ಸಮಕ್ಷಮ ಅಂಟಿಸಿರುತ್ತೇನೆ.

ನಂತರ ಅದೇ ಪಂಚರೊಂದಿಗೆ ಮಾನ್ಯ ಮುಂಡಗೋಡ ನ್ಯಾಯಾಲಯಕ್ಕೆ ತೆರಳಿ, ಶಿರಸ್ತೇದಾರರವರನ್ನು ಭೇಟಿಯಾಗಿ , ವಾರಂಟಿನ ವಿಷಯವನ್ನು ತಿಳಿಸಿ, ಅಲ್ಲಿಯ ನೋಟಿಸ್ಸ ಬೋರ್ಡಿಗೂ ಸಹಿತ ಉದ್ಘೋಷಣಾ ವಾರಂಟಿನ ಪ್ರತಿಯನ್ನು ಎದ್ದು ಕಾಣುವಂತೆ ಪಂಚರ ಸಮಕ್ಷಮ ಅಂಟಿಸಿ, ಆರೋಪಿಯ ಹೆಸರನ್ನು ಗಟ್ಟಿಯಾಗಿ ಸಾರ್ವಜನಿಕರಿಗೆ ಕೇಳಿಸುವಂತೆ ಕೂಗಿ ಹೇಳಿ, ಆರೋಪಿ ಸಿಕ್ಕಲ್ಲಿ ಆತನನ್ನು ನಮೂದಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಹೇಳಿರುತ್ತೇನೆ.

ನಂತರ ಅದೇ ಪಂಚರೊಂದಿಗೆ ಗ್ರಾಮ ಪಂಚಾಯಿತಿಗೆ ತೆರಳಿ, ತಹಶೀಲ್ದಾರ ಕಚೇರಿಗೆ ತೆರಳಿ, ಸದರಿ ಆರೋಪಿಯ ಹೆಸರಿನಲ್ಲಿ ಚರಾಸ್ತಿ ಅಥವಾ ಸ್ಥಿರಾಸ್ತಿ ಇದ್ದಲ್ಲಿ ಮಾಹಿತಿಯನ್ನು ಒದಗಿಸುವಂತೆ, ಮನವಿ ಪತ್ರವನ್ನು ಸಲ್ಲಿಸಿ, ಅಲ್ಲಿಯ ನೋಟಿಸ್ಸ ಬೋರ್ಡಿಗೂ ಸಹಿತ ಉದ್ಘೋಷಣಾ ವಾರಂಟಿನ ಪ್ರತಿಯನ್ನು ಎದ್ದು ಕಾಣುವಂತೆ ಪಂಚರ ಸಮಕ್ಷಮ ಅಂಟಿಸಿ, ಆರೋಪಿಯ ಹೆಸರನ್ನು ಗಟ್ಟಿಯಾಗಿ ಸಾರ್ವಜನಿಕರಿಗೆ ಕೇಳಿಸುವಂತೆ ಕೂಗಿ ಹೇಳಿ, ಆರೋಪಿ ಸಿಕ್ಕಲ್ಲಿ ಆತನನ್ನು ನಮೂದಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಹೇಳಿರುತ್ತೇನೆ.

ಪಂಚನಾಮೆಯನ್ನು ಸದರಿ ದಿನದಂದು ಬೆಳಿಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೂ ಜರುಗಿಸಿರುತ್ತೇನೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇಂದೂರು ಮತ್ತು ತಹಶೀಲ್ದಾರ ಮುಂಡಗೋಡ ಇವರು ಆರೋಪಿಯ ಹೆಸರಿನಲ್ಲಿ ಯಾವುದೇ ಚರಾಸ್ತಿ ಅಥವಾ ಸ್ಥಿರಾಸ್ತಿ ಇರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ.

ನ್ಯಾಯಾಲಯದ ಮುಂದಿರುವ ಪಂಚನಾಮೆಯನ್ನು ನೋಡಿ ಗುರುತಿಸುತ್ತೇನೆ ಅದನ್ನು ನಿಪಿ.1 ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇಂದೂರು ಮತ್ತು ತಹಶೀಲ್ದಾರ ಮುಂಡಗೋಡ ಇವರಿಗೆ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಸಲ್ಲಿಸಿದ ಮನವಿಯನ್ನು ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ, ಅವುಗಳನ್ನು ಅನುಕ್ರಮವಾಗಿ **ನಿಪಿ.2 ಮತ್ತು ನಿಪಿ.3 ಎಂದು,** ಹಾಗೂ ಅದರಲ್ಲಿರುವ ಸಹಿಗಳನ್ನು ಅನುಕ್ರಮವಾಗಿ ನಿಪಿ. **2 ಎ ಮತ್ತು ನಿಪಿ.3 ಎ ಎಂದು** ಗುರುತಿಸಲಾಯಿತು.

ಸದರಿಯವರು ನೀಡಿದ ವರದಿಗಳನ್ನು ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ, ಅವುಗಳನ್ನು ಅನುಕ್ರಮವಾಗಿ **ನಿಪಿ.4 ಮತ್ತು ನಿಪಿ.5** ಎಂದು ಗುರುತಿಸಲಾಯಿತು.

ವಾರಂಟ್ ಜಾರಿ ಮಾಡುವ ಕಾಲಕ್ಕೆ ತೆಗೆದ ಛಾಯಾ ಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ, ಸದರಿ ಛಾಯಾವ ಚಿತ್ರವನ್ನು ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರಕ್ಕೆ ಮತ್ತು ಸಿ.ಡಿ ಗೆ ಒಳಪಟ್ಟು ಅವುಗಳನ್ನು ಒಟ್ಟಾಗಿ **ನಿಪಿ.6** ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**